

# ರೆಪ್ಪೆ ಮೇಲೆ ಕಪ್ಪು ಎಳೆ

■ ಪವಿತ್ರಾ ಭಟ್

ಕಣ್ಣುಗಳ ಅಂದ ಇಡೀ ಮುಖದ ಸೌಂದರ್ಯವನ್ನೇ ಇಮ್ಮಡಿಗೊಳಿಸಬಲ್ಲದು. ಹೀಗಾಗಿಯೇ ಮೇಕಪ್ ಮಾಡುವಾಗ ಕಣ್ಣಿನ ಅಲಂಕಾರಕ್ಕೆ ಹೆಚ್ಚು ಮಹತ್ವ ನೀಡುವುದು. ಕಾಜಲ್, ಐಲೈನರ್ ಹಚ್ಚಿದಾಗ ಕಣ್ಣುಗಳು ಹೊಳೆಯುವುದಂತೂ ನಿಶ್ಚಿತ.

ನಟಿ ಸಾಯಿ ಪಲ್ಲವಿ ಸಂದರ್ಶನವೊಂದರಲ್ಲಿ ಮುಖಕ್ಕೆ ಐಲೈನರ್ ಬಿಟ್ಟರೆ ಬೇರೇನನ್ನೂ ಹಚ್ಚುವುದಿಲ್ಲ ಎಂದಿದ್ದರು. ಕಣ್ಣಿನ ಅಂದವೇ ಅಂಥದ್ದು. ಕಣ್ಣಿನ ಆಕಾರಕ್ಕೆ ತಕ್ಕ ಹಾಗೆ ಕಪ್ಪು ಬಣ್ಣದ ಎಳೆ ಎಳೆದುಕೊಂಡರೆ ಸಾಕು ಮೇಕಪ್ ಪರಿಪೂರ್ಣ. ಕಣ್ಣುಗಳಿಗೆ ಕಪ್ಪು ಹಚ್ಚುವ ಮೊದಲು ನಮ್ಮ ಕಣ್ಣಿನ ಆಕಾರ ತಿಳಿದುಕೊಂಡು ಅದಕ್ಕೆ ತಕ್ಕ ಹಾಗೆ ಎಳೆಯನ್ನು ಎಳೆದುಕೊಳ್ಳುವುದು ಮುಖ್ಯ.

**ಅಗಲ ಕಣ್ಣುಗಳು:** ಅಗಲವಾದ ಕಣ್ಣುಗಳಿದ್ದರೆ ಲೈನರ್ ಬಳಸುವಾಗ ಬಹಳ ಎಚ್ಚರ ವಹಿಸಬೇಕು. ಎರಡೂ ಕಣ್ಣುಗಳು ಸಮೀಪವಿರುವಂತೆ ಕಾಣಬೇಕಿದ್ದರೆ ಮೇಲಿನ ಮತ್ತು ಕೆಳಗಿನ ಕಣ್ಣಿನ ರೆಪ್ಪೆ ತೀರಾ ಒಳಭಾಗ (ಕಣ್ಣೀರಿನ ನಾಳದಿಂದ)ದಿಂದ ಲೈನರ್ ಹಚ್ಚಬೇಕು. ಕಣ್ಣಿನ ರೆಪ್ಪೆಯ ಎರಡು ತುದಿಗಳಲ್ಲಿ ಗೆರೆಗಳನ್ನು ಸೇರಿಸಬೇಕು. ಕೆಳ ರೆಪ್ಪೆಯ ಹೊರಭಾಗದಲ್ಲಿ ಬ್ರಷ್‌ನಿಂದ ತೆಳ್ಳಗೆ ಲೈನರ್ ಹಚ್ಚಲು ಮರೆಯಬೇಡಿ.

**ಬಾದಾಮಿ ಕಣ್ಣುಗಳು:** ಬಾದಾಮಿ ಆಕಾರದ ಕಣ್ಣುಗಳು ನೋಡುಗರನ್ನು ಸೆಳೆಯುತ್ತವೆ. ರೆಪ್ಪೆಗಳು ಒಂದೇ ಆಕಾರದಲ್ಲಿರುತ್ತವೆ. ಇಂಥ ಕಣ್ಣುಗಳ ಒಳತುದಿಯಿಂದ ತೆಳ್ಳಗಿನ ಗೆರೆಯಿಂದ ಆರಂಭಿಸಿ ಮಧ್ಯಭಾಗದಲ್ಲಿ ದಪ್ಪವಾಗಿ ಹಚ್ಚಬೇಕು ಮತ್ತು ಕೊನೆಗೆ ರೆಕ್ಕೆಯ ಆಕಾರ ಬರೆಯಬೇಕು. ಇದು ಕಣ್ಣನ್ನು ಇನ್ನಷ್ಟು ಆಕರ್ಷಕವಾಗಿಸುತ್ತದೆ.

**ಮುಚ್ಚಿದಂತಿರುವ ಕಣ್ಣುಗಳು:** ಕೆಲವರ ಕಣ್ಣುಗಳು ಚಿಕ್ಕದಾಗಿ ಮುಚ್ಚಿದಂತಿರುತ್ತವೆ. ಈ ರೀತಿಯ ಕಣ್ಣುಗಳು ಎದ್ದು ಕಾಣಬೇಕೆಂದರೆ, ಬೆಕ್ಕಿನ ಕಣ್ಣಿನ ರೀತಿಯಲ್ಲಿ ವಿನ್ಯಾಸಗೊಳಿಸಬೇಕು. ಅದಕ್ಕಾಗಿ ರೆಪ್ಪೆಯ ಮಧ್ಯಭಾಗದಲ್ಲಿ ದಪ್ಪ ಲೈನರ್ ಇರಲಿ. ಚೂಪಾದ ತುದಿಗಳಿರಲಿ. ಇದು ಕಣ್ಣಿನ ಗಾತ್ರ ಮತ್ತು ವಿನ್ಯಾಸ ಎದ್ದು ಕಾಣುವಂತೆ ಮಾಡುತ್ತದೆ.

**ಆಳದಲ್ಲಿರುವ ಕಣ್ಣುಗಳು:** ಮೂಳೆಯ ಒಳಭಾಗದಲ್ಲಿ ಹೂತು ಹೋಗಿರುವಂಥ ಕಣ್ಣುಗಳನ್ನು ಆಕರ್ಷಕವಾಗಿ ಎದ್ದು ಕಾಣುವಂತೆ ಮಾಡಲು ಕಣ್ಣಿನ ತೀರಾ ಹೊರಭಾಗದಲ್ಲಿ ಲೈನರ್ ಬಳಸಬೇಕು. ಹೆಚ್ಚು ದಪ್ಪ ಅಥವಾ ಹೆಚ್ಚು ತೆಳು ಇಲ್ಲದಂತೆ ಎಚ್ಚರವಹಿಸಿ. ಇವು ಕಣ್ಣನ್ನು ಇನ್ನಷ್ಟು ಚಿಕ್ಕದಾಗಿ ಕಾಣುವಂತೆ ಮಾಡುತ್ತದೆ.

## ಸಿಂಪಲ್ ಐಲೈನರ್

ಕಣ್ಣಿನ ಮಧ್ಯಭಾಗದಲ್ಲಿ ಮೊದಲು ಲೈನರ್‌ನಿಂದ ಒಂದು ಸಣ್ಣ ಎಳೆಯನ್ನು ಎಳೆದುಕೊಳ್ಳಿ. ನಂತರ ಅದರ ಮೇಲ್ಭಾಗದಲ್ಲಿ ಇನ್ನೊಂದು ಎಳೆಯನ್ನು ಎಳೆದು ಕೊಂಚ ಢಾಳಾಗಿಸಿ. ಕಣ್ಣಿನ ಕೊನೆಯವರೆಗೆ ಮಾತ್ರ ಐಲೈನರ್ ಹಚ್ಚಿಕೊಳ್ಳಿ.

## ಪಿನ್‌ಅಪ್ ಸ್ಟೈಲ್

ಮೊದಲು ಒಂದು ರೆಕ್ಕೆಯಂತೆ ಕಣ್ಣಿನ ಅಂಚಿನಿಂದ ಹೊರಭಾಗಕ್ಕೆ ಎಳೆದುಕೊಳ್ಳಿ. ನಂತರ ಸಣ್ಣ ಎಳೆಯನ್ನು ಕಣ್ಣಿನುದ್ದಕ್ಕೂ ಎಳೆದುಕೊಂಡು ಕೊಂಚ ಗಾಢವಾಗಿಸಿ. ಇದು ಹೂತುಹೋಗಿರುವ ಕಣ್ಣುಗಳನ್ನು ಹೊಂದಿರುವವವರಿಗೆ ಅಂದವಾಗಿ ಕಾಣಿಸುತ್ತದೆ.

## ಎಂಜಲ್ ವಿಂಗ್ ಐಲೈನರ್

ಬಂಗಾಳಿ ವಧುವಿಗೆ ಈ ಸ್ಟೈಲ್ ಲೈನರ್ ಹಚ್ಚಲಾಗುತ್ತದೆ. ಏಂಜಲ್ ವಿಂಗ್ ಐಲೈನರ್ ಅನ್ನು ಪಾರ್ಟಿ, ಕಾರ್ಯಕ್ರಮಗಳಿಗೆ ಹಚ್ಚಿಕೊಳ್ಳಬಹುದು. ಇದು ಕಣ್ಣುಗಳಿಗೆ ಬೋಲ್ಡ್ ಲುಕ್ ನೀಡುತ್ತದೆ. ಕಣ್ಣುಗಳ ಅಂಚಿನಲ್ಲಿ ರೆಕ್ಕೆಯಂತೆ ಹಚ್ಚಿಕೊಂಡು ಉಳಿದ ಭಾಗಕ್ಕೆ ಸಣ್ಣ ಎಳೆಯನ್ನು ಎಳೆದುಕೊಂಡರೆ ಏಂಜಲ್ ವಿಂಗ್ ರೀತಿ ಕಾಣಿಸುತ್ತದೆ.

## ಡಬಲ್ ವಿಂಗ್ ಲೈನರ್

ಕಣ್ಣಿನ ಅಂಚಿನಿಂದ ಬುಡದವರೆಗೆ ಎಸ್ (S) ಅಕ್ಷರ ಅಡ್ಡಲಾಗಿ ಬರೆದಾಗ ಕಾಣುವಂತೆ ಐಲೈನರ್ ಹಚ್ಚಿಕೊಳ್ಳಿ. ಈ ಸ್ಟೈಲ್‌ನಲ್ಲಿ ಕಣ್ಣಿನ ಕೆಳಭಾಗದಲ್ಲೂ ಐಲೈನರ್ ಹಚ್ಚಿಕೊಳ್ಳಿ. ಇದು ಪುಟ್ಟ ಕಣ್ಣುಗಳು ಇರುವವರಿಗೆ ಉತ್ತಮ ಆಯ್ಕೆಯಾಗಿದೆ.

## ಐಲೈನರ್ ವೈವಿಧ್ಯ

**ಪೆನ್ಸಿಲ್ ಐಲೈನರ್:** ಹೆಚ್ಚು ಜನರು ಬಳಸುವುದು ಪೆನ್ಸಿಲ್ ಐಲೈನರ್‌ಗಳನ್ನೇ. ಇದು ಬಳಸಲು ಸುಲಭ. ಜತೆಗೆ ಗಾಢವಾಗಿಯೂ ಕಾಣಿಸುತ್ತದೆ. ಪೆನ್ಸಿಲ್ ಐಲೈನರ್ ಸ್ಮಡ್ಜ್ ಮಾಡಲು ಮತ್ತು ಮೃದುಗೊಳಿಸಲು ಸುಲಭ, ಇದು ನೈಸರ್ಗಿಕವಾಗಿ ಕಾಣಬೇಕು ಎನ್ನುವವರಿಗೆ ಸೂಕ್ತವಾಗಿದೆ.

**ಲಿಕ್ವಿಡ್ ಐಲೈನರ್:** ಲಿಕ್ವಿಡ್ ಐಲೈನರ್‌ಗಳಿಂದ ಬೇಕಾದ ಹಾಗೆ ಸ್ಟೈಲ್ ಮಾಡಿಕೊಳ್ಳಬಹುದು. ಇದು ವೇಗವಾಗಿ ಒಣಗುತ್ತದೆ, ಜತೆಗೆ ಹೊಳಪು ಮತ್ತು ಮ್ಯಾಟ್ ಫಿನಿಶ್ ನೀಡುತ್ತದೆ. ಕ್ಯಾಟ್ ಐ ಅಥವಾ ವಿಂಕ್ಡ್ ಐಗಳಂತಹ ಕಣ್ಣಿನ ಮೇಕಪ್ ಶೈಲಿಗಳನ್ನು ಮಾಡಿಕೊಳ್ಳಲು ಉತ್ತಮ.

**ಜೆಲ್ ಐಲೈನರ್:** ಜೆಲ್ ಐಲೈನರ್ ದೀರ್ಘಕಾಲ ಬಾಳಿಕೆ ಬರುತ್ತದೆ. ಗಾಢವಾದ ಬಣ್ಣವನ್ನು ನೀಡುತ್ತದೆ. ಇದು ವಾಟರ್‌ಪ್ರೂಫ್ ಆಗಿದ್ದು, ದೀರ್ಘಕಾಲದವರೆಗೆ ಉಳಿಯುತ್ತದೆ. ■

### ಕಲರ್ ಐಲೈನರ್

ಇತ್ತೀಚೆಗೆ ಬರೀ ಕಪ್ಪು ಬಣ್ಣ ಮಾತ್ರವಲ್ಲದೆ ವಿವಿಧ ಬಣ್ಣಗಳ ಐಲೈನರ್‌ಗಳೂ ಲಭ್ಯವಿದೆ. ಇದಕ್ಕೆ ಮೊದಲು ಕಪ್ಪು ಬಣ್ಣದ ಐಲೈನರ್‌ನಲ್ಲಿ ಕಣ್ಣಿನ ತುದಿಯಲ್ಲಿ ರೆಕ್ಕೆಯಂತೆ ಹಚ್ಚಿಕೊಂಡು ನಂತರ ಕಣ್ಣಿನ ಬುಡದಿಂದ ಸಣ್ಣ ಎಳೆಯನ್ನು ಎಳೆದುಕೊಳ್ಳಿ. ನಂತರ ನೀಲಿ ಬಣ್ಣದ ಐಲೈನರ್‌ನಲ್ಲಿ ಅದರ ಮೇಲೆ ಎಳೆಯನ್ನು ಎಳೆದುಕೊಳ್ಳಿ. ನಿಮ್ಮ ಉಡುಪಿಗೆ ತಕ್ಕ ಹಾಗೆ ಬಣ್ಣದ ಆಯ್ಕೆಯಿರಲಿ.